ಬೆಂಗಳೂರು ಸಿವಿಲ್ ಮತ್ತು ಮಿಲಿಟರಿ ಸ್ಟೇಷನ್ (ದಂಡು).

ಆಹಾರ ಧಾನ್ಯಗಳ ಧಾರಣೆಗಳು :—

	ಇದೇ ವಾರಕ್ಕೆ	ಹಿಂದಿನ 5 ವರ್ಷಗಳ ಅಂದಾಜು.	ಚಾಲ್ತಿ.
ಅಕ್ಕಿ	ರೂಪಾಯಿ 1 ಕ್ಕೆ	$7\frac{3}{4}$ .. 6 ರಿಂದ $6\frac{1}{2}$ ವರಿಗೆ	ಸೇರುಗಳು.
ರಾಗಿ	,, ...	$20\frac{3}{4}$ $12\frac{1}{2}$ ರಿಂದ $13\frac{1}{2}$ ವರಿಗೆ	

ವ್ಯವಸಾಯ ಕೆಲಸಗಳು—ರಾಗಿ ಕಳೆ ಕೀಳುವದು.

ದನಗಳು ಒಳ್ಳೇ ಸ್ಥಿತಿಯಲ್ಲಿವೆ. ನೀರು ಸಾಕು. ಹುಲ್ಲಿನ ಬೆಲೆಯು ಹೆಚ್ಚುತ್ತಲಿದೆ.

ಬೆಂಗಳೂರುಪಟ್ಟಣ ಮತ್ತು ತಾಲ್ಲೂಕುಗಳು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಏನೂ ಇಲ್ಲ.

ನಿಂತಿರುವ ಪೈರುಗಳು—ಬಾಡಿ ಹೋಗುತ್ತಾ ಇದ್ದು, ಈಗ ಮಳೆ ಬಂದ ಕಾರಣದಿಂದ ಅಭಿವೃದ್ಧಿಸ್ಥಿತಿಗೆ ಬರುತ್ತಲಿವೆ ಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರು.—ಹೊಸಕೋಟೆ ಮತ್ತು ಆನೇಕಲ್ಲು ತಾಲ್ಲೂಕುಗಳಲ್ಲಿ ಹುರುಳಿಯನ್ನು ಬಿತ್ತುತ್ತಾ ಇದ್ದಾರೆ.

ಕುಯ್ಯಲಾದ ಪೈರು — ದೇವನಹಳ್ಳಿ ತಾಲ್ಲೂಕಿನಲ್ಲಿ ಅಲಸಂಗೆಡ್ಡೆಯನ್ನು ಅಗಿದು ತೆಗಿಯುತ್ತ ಇದ್ದಾರೆ.

ಎಲ್ಲಾ ತಾಲ್ಲೂಕುಗಳಲ್ಲಿಯೂ ಮಳೆ ಬಿದ್ದಿದೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಆಹಾರ ಜಿನಸು ಸಾಕಾದಷ್ಟು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಹೊಸಕೋಟೆ, ದೊಡ್ಡಬಳ್ಳಾಪುರ, ನೆಲಮಂಗಲ, ಕಾರ್ಯಹಳ್ಳಿ, ಆನೇಕಲ್ಲು, ದೇವನಹಳ್ಳಿ, ಚನ್ನಪಟ್ಟಣ, ಈ ಕಸಬಾಗಳಲ್ಲಿಯೂ ಮತ್ತು ಹೊಸಕೋಟೆ, ನೆಲಮಂಗಲ, ಈ ತಾಲ್ಲೂಕುಗಳ ಕೆಲವು ಹೋಬಳಿಗಳಲ್ಲಿಯೂ ಪ್ಲೇಗ್ ಇದೆಯೆಂದು ರಿಪೋರ್ಟಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕೋಲಾರ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳ ಅಭಿವೃದ್ಧಿ—ಡಿಸ್ಟ್ರಿಕ್ಟಿನಲ್ಲಿ ಸಾಧಾರಣವಾಗಿ ಎಲ್ಲಾ ತಾಲ್ಲೂಕುಗಳಲ್ಲಿಯೂ ಪುರುಳಿಯನ್ನು ಬಿತ್ತುವದಕ್ಕಾಗಿ ಭೂಮಿಯನ್ನು ಉಳುತ್ತಿದ್ದಾರೆ.

ನಿಂತಿರುವ ಪೈರುಗಳು—ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಲ್ಲಿಯೂ ಕುಷ್ಕಿ ಪೈರುಗಳು ಅಭಿವೃದ್ಧಿಸ್ಥಿತಿಗೆ ಬರುತ್ತಾ ಇವೆ.

ಬಿತ್ತನೆಯಾದ ಪೈರುಗಳು—ಕೋಲಾರ, ಬಂಗಾರಿಂಗಪೇಟೆ, ಮುಳಬಾಗಲು, ಶಿಡ್ಲಘಟ್ಟ, ಬಾಗೇಪಲ್ಲಿ, ಗೋರೀಬಿದನೂರು, ಮಾಲೂರು, ಶ್ರೀನಿವಾಸಪುರ, ಗುಡಿಬಂಡೆ, ಇವುಗಳಲ್ಲಿ ಹುರುಳಿ; ಬಂಗಾರಿಂಗಪೇಟೆ, ಮಾಲೂರು, ಇವುಗಳಲ್ಲಿ ಹುಚ್ಚೆಳ್ಳು.

ಕುಯ್ಯಲಾದ ಪೈರುಗಳು—ಏನೂ ಇಲ್ಲ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಿಸು ಸಿಕ್ಕುತ್ತವೆ.

11. ಕೋಲಾರದ ಚಿನ್ನದ ಗಣಿಯಲ್ಲಿಯೂ, ಬಂಗಾರಿಂಗಪೇಟೆ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿಯೂ ಮತ್ತು ಕೋಲಾರದ ಕಸಬಾದಲ್ಲಿಯೂ ಅಲ್ಲಲ್ಲಿ ಆದ ಕೆಲವು ಪ್ಲೇಗ್ ಕೇಸುಗಳೂ, ಮತ್ತು ಚಿಂತಾಮಣಿ ಕಸಬಾದಲ್ಲಿ ನೀತಾಳಿಸಿಡುಬು ಮತ್ತು ಸಿಡುಬೂ, ಇವುಗಳು ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಚಿಂತಾಮಣಿ ಕಸಬಾ ಹೋಬಳಿಯ ಕೆಲವು ಭಾಗಗಳಲ್ಲಿ ದನಗಳಿಗೆ "ಸಪ್ಪೆ ರೋಗವು" ಬಂದಿರುವದು ಹೊರ್ತು ಮಿಕ್ಕ ಪುಗಳೆಲ್ಲಾ ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ತುಮಕೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಬಿತ್ತುವದು, ಮತ್ತು ಉಳುವದು.

ಬಿತ್ತನೆಯಾದ ಪೈರುಗಳು—ತುಮಕೂರು, ಶೀರ್ಯ, ಮದ್ದಗಿರಿ, ಗುಬ್ಬಿ, ತಿಪಟೂರು, ಪಾವಗಡ, ಕುಣಿಗಲ್ಲು ಇವುಗಳಲ್ಲಿ ಹುರುಳಿ; ಗುಬ್ಬಿ, ತಿಪಟೂರು, ಇವುಗಳಲ್ಲಿ ರಾಗಿ ಮತ್ತು ಸಾವೆ; ಗುಬ್ಬಿಯಲ್ಲಿ ನವಣೆ, ಹಾರಕ, ಜೋಳ ಮತ್ತು ಹುಚ್ಚೆಳ್ಳು; ತಿಪಟೂರಿನಲ್ಲಿ ಕಡಲೆ ಮತ್ತು ತೊಗರಿ; ಕುಣಿಗಲಿನಲ್ಲಿ ಉದ್ದೂ ಮತ್ತು ಹೆಸರು.

ಕುಯ್ಯಲಾದ ಪೈರುಗಳು—ಶೀರ್ಯ, ಗುಬ್ಬಿ, ಇವುಗಳಲ್ಲಿ ಜೋಳ; ತಿಪಟೂರಿನಲ್ಲಿ ಭತ್ತ; ಪಾವಗಡದಲ್ಲಿ ರಾಗಿ; ಕುಣಿಗಲ್ಲು, ಗುಬ್ಬಿ, ಇವುಗಳಲ್ಲಿ ಕಬ್ಬು; ಗುಬ್ಬಿಯಲ್ಲಿ ಎಳ್ಳು ಮತ್ತು ಹೆಸರು.

10. ಕಾಲದ ಆಯತಿಯು ಚೆನ್ನಾಗಿದೆ. ಆದರೆ, ಶೀರ್ಯದ ತಾಲ್ಲೂಕು ನಡೂರು, ಬುಕ್ಕಾಪಟ್ಣ, ಈ ಹೋಬಳಿಗಳಲ್ಲಿ ಪೈರುಗಳಿಗೆ ಮಳೆಯು ಇನ್ನೂ ಹೆಚ್ಚಾಗಿ ಬೇಕಾಗಿದೆ.

11. ಜನಾರೋಗ್ಯವು ಚೆನ್ನಾಗಿದೆ ಆದರೆ, ತುಮಕೂರು ಕಸಬಾದಲ್ಲಿ ಪ್ಲೇಗ್ ಇನ್ನೂ ಇರುತ್ತಲಿದೆ.

12. ನೀರೂ, ಹುಲ್ಲೂ ಸಿಕ್ಕುತ್ತವೆ. ಆದರೆ, ಶೀರ್ಯದ ತಾಲ್ಲೂಕು ನಡೂರು, ಬುಕ್ಕಾಪಟ್ಣ, ಈ ಹೋಬಳಿಗಳ ಕೆಲವು ಭಾಗಗಳಲ್ಲಿ ನೀರಿನ ಪ್ರಮಾಣವು ಪುರ ಆಗಿ ಇದೆ.

ಮೈಸೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ಮಳವಳ್ಳಿ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭತ್ತದ ಸಸಿಯನ್ನು ಕಿತ್ತು ನಾಟುತ್ತಿದ್ದಾರೆ.

ನಿಂತಿರುವ ಪೈರುಗಳು—ಎಲ್ಲಾ ತಾಲ್ಲೂಕುಗಳಲ್ಲಿಯೂ ಚೆನ್ನಾಗಿವೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು—ಗುಂಡ್ಲುಪೇಟೆ, ಮಳವಳ್ಳಿ, ನಾಗಮಂಗಲ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಹುರುಳಿ; ಗುಂಡ್ಲುಪೇಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಉದ್ದೂ ಮತ್ತು ಹೆಸರು; ನಂಜನಗೂಡು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಅರಳಿ ಮತ್ತು ಕಡಲೆ.

ಕುಯ್ಯಲಾದ ಪೈರುಗಳು—ಹೆಗ್ಗಡದೇವನಕೋಟೆ ತಾಲ್ಲೂಕಿನ ಕೆಲವು ಭಾಗಗಳಲ್ಲಿ ರಾಗಿ ಮತ್ತು ಎಳ್ಳು.

10. ಕಾಲದ ಆಯತಿಯು ಚೆನ್ನಾಗಿದೆ. ರೈತರೆಲ್ಲೂ ಮತ್ತು ವರ್ತಕರಲ್ಲಿಯೂ ಸಾಕಾದಷ್ಟು ಆಹಾರ ಜಿನಸು ಇವೆಯೆಂದು ರಿಪೋರ್ಟಾಗಿದೆ.

11. ಮೈಸೂರು, ಚಾಮರಾಜನಗರ, ಹುಣಸೂರು, ಗುಂಡ್ಲುಪೇಟೆ, ನಂಜನಗೂಡು, ಮಂಡ್ಯ, ಈ ತಾಲ್ಲೂಕುಗಳಲ್ಲಿ ಪ್ಲೇಗ್ ಇರುವದು ಹೊರ್ತು ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ಎಲ್ಲಾ ತಾಲ್ಲೂಕುಗಳಲ್ಲಿಯೂ ದನಗಳು ಆರೋಗ್ಯವಾಗಿವೆಯೆಂದು ರಿಪೋರ್ಟಾಗಿದೆ. ಎಲ್ಲಾ ಕಡೆಯಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಹಾಸನ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು—ರೈತರುಗಳು ಹಾಸನದ ತಾಲ್ಲೂಕಿನಲ್ಲಿ ಹೊಲಗಳನ್ನು ಉಳುವ ಕೆಲಸದಲ್ಲಿದ್ದಾರೆ ಮತ್ತು ಹುರುಳಿ, ಈಡ್ಲೆ, ಇವುಗಳನ್ನು ಬಿತ್ತುತ್ತಿದ್ದಾರೆ.

ನಿಂತಿರುವ ಪೈರುಗಳು—ಮಂಜರಾಬಾದ್ ತಾಲ್ಲೂಕಿನಲ್ಲಿಯೂ ಮತ್ತು ಆಲೂರು ಸಬ್ ತಾಲ್ಲೂಕಿನಲ್ಲಿಯೂ ಭತ್ತ ಮತ್ತು ರಾಗಿ; ಚೆನ್ನರಾಯಪಟ್ಣ, ಅರಕೀಕೆರೆ, ಅರಕಲಗೂಡು, ಈ ತಾಲ್ಲೂಕುಗಳಲ್ಲಿ ಭತ್ತ, ರಾಗಿ ಮತ್ತು ಅವರೆ; ಬೇಲೂರು, ಅರಕೀಕೆರೆ, ಈ ತಾಲ್ಲೂಕುಗಳಲ್ಲಿ ಭತ್ತ, ಜೋಳ, ಹುಚ್ಚೆಳ್ಳು, ಮತ್ತು ಕಬ್ಬು; ಹೊಳೇನರಸೀಪುರದ ತಾಲ್ಲೂಕಿನಲ್ಲಿ ಭತ್ತ, ಕಬ್ಬು, ದೊಡ್ಡರಾಗಿ, ತೊಗರಿ, ಹರಳು, ಅವರೆ, ಮೆಣಸಿನಕಾಯಿ ಮತ್ತು ಹುರುಳಿ; ಇವುಗಳೆಲ್ಲಾ ಒಳ್ಳೇ ಸ್ಥಿತಿಯಲ್ಲಿವೆ.

ಕುಯ್ಯಲಾದ ಪೈರುಗಳು—ಮಂಜರಾಬಾದ್ ಮತ್ತು ಬೇಲೂರು ತಾಲ್ಲೂಕುಗಳಲ್ಲಿ ರಾಗಿ; ಅರಕೀಕೆರೆ ತಾಲ್ಲೂಕಿನಲ್ಲಿ ಹುಚ್ಚೆಳ್ಳು, ಉದ್ದು ಮತ್ತು ಹೆಸರು ಇವುಗಳು ಕುಯ್ಯಲಾಗುತ್ತಿವೆ.

10. ಕಾಲದ ಆಯತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಹಾಸನ, ಬೇಲೂರು, ಚೆನ್ನರಾಯಪಟ್ಣ. ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಪ್ಲೇಗ್ ಮತ್ತು ಮಂಜರಾಬಾದ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಭೇದೀಜ್ವರ ಮತ್ತು ಜ್ವರ, ಇವುಗಳು ಇರುವುದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಒಳ್ಳೇ ಸ್ಥಿತಿಯಲ್ಲಿವೆ. ಡಿಸ್ಟ್ರಿಕ್ಟಿನ ಎಲ್ಲಾ ಭಾಗಗಳಲ್ಲಿಯೂ ನೀರೂ, ಹುಲ್ಲೂ ಸಿಕ್ಕುತ್ತವೆ.

ಶಿವಮೊಗ್ಗ.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು—ಯಾವವೆಂದರೆ, ಭತ್ತ, ರಾಗಿ, ಜೋಳ, ಕಬ್ಬು, ಇವುಗಳು ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆ. ಆದರೆ, "ಕೊಳೇ ರೋಗವು" ಮಲನಾಡು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಅಡಿಕೇ ಫಸಲಿಗೆ ಹಿಡಿದು ಇದೆ.

ಬಿತ್ತನೆಯಾದ ಪೈರುಗಳು ಹೊನ್ನಾಳಿ ತಾಲ್ಲೂಕಿನ ಮತ್ತು ಕುಂಸಿ ಸಬ್ ತಾಲ್ಲೂಕಿನ ಕೆಲವು ಭಾಗಗಳಲ್ಲಿ ನವಣೆ, ಸಾವೆ, ಹರಳು, ಹುರುಳಿ, ಹುಚ್ಚೆಳ್ಳು, ಇವುಗಳು ಬಿತ್ತಲ್ಪಡುತ್ತಿವೆ.

10. ಕಾಲದ ಆಯತಿಯು ಸಾಧಾರಣವಾಗಿ ಚೆನ್ನಾಗಿದೆ. ಸಾಕಾದಷ್ಟು ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ. ಆದರೆ, ಸೊರಬದ ತಾಲ್ಲೂಕಿನ ಕೆಲವು ಭಾಗಗಳಲ್ಲಿ ಸಿಡುಬೂ, ಮತ್ತು ಕಸಬಾ ಶಿವಮೊಗ್ಗಿಯಲ್ಲಿಯೂ ಮತ್ತು ಹೊನ್ನಾಳಿ ತಾಲ್ಲೂಕು ಮತ್ತು ಕುಂಸಿ ಸಬ್ ತಾಲ್ಲೂಕು ಇವುಗಳ ಕೆಲವು ಭಾಗಗಳಲ್ಲಿಯೂ ಪ್ಲೇಗ್ ಇವುಗಳು ಇರುತ್ತಲಿವೆ.

12. ಶಿವಮೊಗ್ಗ, ಚೆನ್ನಗಿರಿ, ಶಿಕಾರಿಪುರ, ಸೊರಬ, ಸಾಗರ, ಈ ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ಗೋವಾರೀ ರೋಗವು ಇನ್ನೂ ಇರುತ್ತಲಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಕಡೂರು.

8. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ವ್ಯವಸಾಯ ಕೆಲಸಗಳು — ಕೊಪ್ಪದಲ್ಲಿಯೂ ಮತ್ತು ಎಡೇಹಳ್ಳಿಯಲ್ಲಿಯೂ ಭತ್ತದ ನಸಿಯನ್ನು ಕಿತ್ತು ನಾಟಿದ್ದಾರೆ.

ನಿಂತಿರುವ ಪೈರುಗಳು — ಚಿಕ್ಕಮಗಳೂರು, ಕಡೂರು, ತರೀಕೆರೆ, ಕೊಪ್ಪ, ಮೂಡಿಗೆರೆ, ಎಡೇಹಳ್ಳಿ, ಇವುಗಳಲ್ಲಿ ಭತ್ತ; ಚಿಕ್ಕಮಗಳೂರು, ಕಡೂರು, ತರೀಕೆರೆ, ಮೂಡಿಗೆರೆ, ಇವುಗಳಲ್ಲಿ ರಾಗಿ; ಚಿಕ್ಕಮಗಳೂರಿನಲ್ಲಿ ಅವರೆ; ಚಿಕ್ಕಮಗಳೂರು, ತರೀಕೆರೆ, ಇವುಗಳಲ್ಲಿ ತೊಗರಿ; ಚಿಕ್ಕಮಗಳೂರು, ಮೂಡಿಗೆರೆ, ಎಡೇಹಳ್ಳಿ, ಇವುಗಳಲ್ಲಿ ಕಾಳು; ಚಿಕ್ಕಮಗಳೂರು, ಕೊಪ್ಪ, ಎಡೇಹಳ್ಳಿ, ಇವುಗಳಲ್ಲಿ ಕಬ್ಬು; ಕಡೂರಿನಲ್ಲಿ ನವಣೆ, ಸಾವೆ ಮತ್ತು ಗೋಧಿ; ತರೀಕೆರೆಯಲ್ಲಿ ಜೋಳ, ಹರಳು ಮತ್ತು ಖುರಾಸಾನಿ; ಕೊಪ್ಪ, ಮೂಡಿಗೆರೆ, ಇವುಗಳಲ್ಲಿ ಯಾಲಕ್ಕಿ; ಇವುಗಳಲ್ಲಾ ಒಳ್ಳೆ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಕೊಪ್ಪ, ಕೈಂಗೇರಿ, ಇವುಗಳಲ್ಲಿ ಅಡಿಕೇ ಫಸಲಿಗೆ ಇನ್ನೂ "ಕೊಳೇ ರೋಗವು" ಹಿಡಿದು ಇದೆಯೆಂದು ರಿಪೋರ್ಟಾಗಿದೆ.

ಬಿತ್ತನೆಯಾದ ಪೈರುಗಳು — ಕಡೂರು ತಾಲ್ಲೂಕಿನ ಕೆಲವು ಭಾಗಗಳಲ್ಲಿ ಹುರುಳಿ ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಧನಿಯ ಮತ್ತು ಹುರುಳಿ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ — ಚಿಕ್ಕಮಗಳೂರಿನಲ್ಲಿ ಗಿಡ್ಡ ರಾಗಿ ಉತ್ಪತ್ತಿ 8 ಆಣೆ.

ಕಡೂರಿನಲ್ಲಿ —	ಜೋಳ	ಉತ್ಪತ್ತಿ	8 ಆಣೆ.
	ಕಬ್ಬು	,,	8 ,,
	ಹುಚ್ಚೆಳ್ಳು	,,	6 ,,
	ಧನಿಯಾ	,,	8 ,,
	ಹೆಸರು	,,	4 ,,
	ಉದ್ದು	,,	4 ,,

ತರೀಕೆರೆಯಲ್ಲಿ — ಹುಚ್ಚೆಳ್ಳು ಉತ್ಪತ್ತಿ 16 ಆಣೆ. ಕೊಪ್ಪದಲ್ಲಿ — ಯಾಲಕ್ಕಿ ಉತ್ಪತ್ತಿ 6 ಆಣೆ. ಮೂಡಿಗೆರೆಯಲ್ಲಿ, ಯಾಲಕ್ಕಿ ಉತ್ಪತ್ತಿ 2 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಾಕು.

11. ಕಸಬಾ ಚಿಕ್ಕಮಗಳೂರಿನಲ್ಲಿಯೂ ಮೆತ್ತೆ ಚಿಕ್ಕಮಗಳೂರು, ಕಡೂರು, ಈ ತಾಲ್ಲೂಕುಗಳ ಕೆಲವು ಗ್ರಾಮಗಳಲ್ಲಿಯೂ ಪ್ಲೇಗ್ ಇರುವದು ಹೊರ್ತು, ಜನಾರೋಗ್ಯವು ಸಾಧಾರಣವಾಗಿ ಚೆನ್ನಾಗಿದೆ.

12. ದನಗಳು ಸಾಧಾರಣವಾಗಿ ಆರೋಗ್ಯವಾಗಿವೆ. ಚಿಕ್ಕಮಗಳೂರು, ತರೀಕೆರೆ, ಮೂಡಿಗೆರೆ, ಈ ತಾಲ್ಲೂಕುಗಳಲ್ಲಿಯೂ ಮತ್ತು ಎಡೇಹಳ್ಳಿ ಸಬ್ ತಾಲ್ಲೂಕಿನಲ್ಲಿಯೂ "ದೊಡ್ಡರೋಗವು" ಕವ್ವಿಯಾಗಿ ಬರುತ್ತಿದೆಯೆಂದು ರಿಪೋರ್ಟಾಗಿದೆ. ಆದರೆ, ಕೊಪ್ಪದ ತಾಲ್ಲೂಕು ಅಬ್ಬಮ್ಬಲಿ ಗ್ರಾಮದಲ್ಲಿ "ಲಾಲ್ ಸಂಕೋಲೆ ರೋಗವು", ಪ್ರಬಲ ಆಗಿದೆಯೆಂದು ರಿಪೋರ್ಟಾಗಿದೆ. ರೋಗವನ್ನು ನಿಲ್ಲಿಸತಕ್ಕ ಏರ್ಪಾಡುಗಳನ್ನು ತೆಗೆದುಕೊಂಡು ಇದೆಯೆಂದೂ ಮತ್ತು ರೋಗದಿಂದ ನರಳುವ ಜಾನುವಾರುಗಳಿಗೆ ಕ್ಯಾಟಲ್ ಡಿಸೀಜ್ ಇನ್ಸ್ಪೆಕ್ಟರವರ ಸಲಹೆ ಮೇರಿಗೆ ಚಿಕಿತ್ಸೆಗಳು ಮಾಡಲ್ಪಡುತ್ತಾಯಿವೆಯೆಂದೂ ರಿಪೋರ್ಟಾಗಿದೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಚಿತ್ರದುರ್ಗ.

13. ಬಜಾರಿನಲ್ಲಿ ಸರಬರಾಯಿ ಚೆನ್ನಾಗಿದೆ.

9. ನಿಂತಿರುವ ಪೈರುಗಳು — ಡಿಸ್ಟ್ರಿಕ್ಟಿನಲ್ಲಿ ಹೋದವಾರದಲ್ಲಿ ಆದ ಮಳೆಯಿಂದ, ಎಲ್ಲಾ ತಾಲ್ಲೂಕುಗಳಲ್ಲಿಯೂ ಒಳ್ಳೇ ಸ್ಥಿತಿಯಲ್ಲಿವೆಯೆಂದು ರಿಪೋರ್ಟಾಗಿದೆ. ಆದರೆ, ಚಿತ್ರದುರ್ಗದ ತಾಲ್ಲೂಕು ತುರುವನೂರು ಹೋಬಳಿಯಲ್ಲಿಯೂ ಮತ್ತು ಚಳ್ಳಕೆರೆ ತಾಲ್ಲೂಕು ನಾಯಕನಹಟ್ಟಿ ಹೋಬಳಿಯಲ್ಲಿಯೂ ಮಳೆಯು ಬೇಕಾಗಿದೆ.

ಬಿತ್ತನೆಯಾದ ಪೈರುಗಳು — ಚಿತ್ರದುರ್ಗ, ಚಳ್ಳಕೆರೆ ದಾವಣಗೆರೆ, ಹೊಳಕಾಲ್ಮೂರು. ಈ ತಾಲ್ಲೂಕುಗಳಲ್ಲಿ ಹುರುಳಿ; ದಾವಣಗೆರೆ ತಾಲ್ಲೂಕಿನಲ್ಲಿಯೂ ಮತ್ತು ಹರಿಹರದ ಸಬ್ ತಾಲ್ಲೂಕಿನಲ್ಲಿಯೂ ಅರಳಿ; ದಾವಣಗೆರೆ ತಾಲ್ಲೂಕಿನಲ್ಲಿ ಸಾವೆ ಮತ್ತು ನವಣೆ.

ಕುಯ್ಯಲಾದ ಪೈರುಗಳು ಮತ್ತು ಅವುಗಳ ಉತ್ಪತ್ತಿ :—

ಚಿತ್ರದುರ್ಗ ತಾಲ್ಲೂಕಿನಲ್ಲಿ ಉದ್ದು — ಉತ್ಪತ್ತಿ 8 ಆಣೆ.

ಕಬ್ಬು — ಉತ್ಪತ್ತಿ 4 ಆಣೆ.

ದಾವಣಗೆರೆ ಮತ್ತು ಹೊಸದುರ್ಗದ ತಾಲ್ಲೂಕುಗಳಲ್ಲಿ ಹುಚ್ಚೆಳ್ಳು — ಉತ್ಪತ್ತಿ 6 ರಿಂದ 8 ಆಣೆ ವರೆಗೆ.

ಹೊಸದುರ್ಗ ತಾಲ್ಲೂಕಿನಲ್ಲಿ ಬರಗು — ಉತ್ಪತ್ತಿ 10 ಆಣೆ.

10. ಕಾಲದ ಆಯುತಿಯು ಚೆನ್ನಾಗಿದೆ. ಆಹಾರ ಜಿನಸು ಸಿಕ್ಕುತ್ತವೆ.

11. ಜನಾರೋಗ್ಯವು ಚೆನ್ನಾಗಿದೆ.

12. ದನಗಳು ಆರೋಗ್ಯವಾಗಿವೆ. ನೀರೂ, ಹುಲ್ಲೂ ಸಿಕ್ಕುತ್ತವೆ.

ಬೆಂಗಳೂರು,
1907ನೆಯ ವರ್ಷದ ಅಕ್ಟೋಬರ್ 5ನೆಯ ತಾರೀಖು.

ಎ. ರಂಗಸ್ವಾಮಿ ಐಯ್ಯಂಗಾರ್,
ರೆವಿನ್ಯೂ ಕಮಿಷನರ್.

Government Press, Bangalore—1907